**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**ಸಿ.ಸಿ. ನಂ.1481/2023** **ಪ್ರಾ.ಸಾ – 2**
**ಚಾ.ಸಾ – 2**

**ದಿನಾಂಕ: 11.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಪ್ರಸನ್ನ.ಎಸ್ |
| ತಂದೆಯ ಹೆಸರು | : | ಸಣ್ಣಮಲ್ಲಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಅಬಕಾರಿ ಮುಖ್ಯ ಪೇದೆ,<br>ತಿಪಟೂರು ಅಬಕಾರಿ ಉಪವಿಭಾಗ |
| ವಾಸಸ್ಥಳ | : | ತಿಪಟೂರು |

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ದಿಃ 10-03-2021 ರಿಂದ 05-04-2024 ರವರೆಗೆ ನಾನು ಅಬಕಾರಿ ಉಪ ವಿಭಾಗ ತಿಪಟೂರಿನಲ್ಲಿ ಅಬಕಾರಿ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಂತರ ದಿನಾಂಕಃ 05-04-2024 ರಿಂದ ಪ್ರಸ್ತುತ ಈ ದಿನದವರೆಗೆ ತಿಪಟೂರು ಉಪ ವಿಭಾಗದಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 01-04-2021 ರಂದು ಬೆಳಗ್ಗೆ 11 ಗಂಟೆಗೆ ವಿಧಾನಸಭಾ ಸಾರ್ವತ್ರಿಕ ಚುನಾವಣೆ 2023 ರ ನಿಮಿತ್ತ ಮಾನ್ಯ ಅಬ ಕಾರಿ ಉಪ ಆಯುಕ್ತರು ತುಮಕೂರು ರವರ ನಿರ್ದೇಶನದ ಮೇರೆಗೆ ಚಾಸಾ-1 ರವರು ತಿಪಟೂರು ತಾಲೂಕು ಬೋಚಿಹಳ್ಳಿ ಗೇಟ್ ಬಳಿ ರಸ್ತೆ ಕಾವಲು ನಡೆಸುತ್ತಿದ್ದಾಗ ನೊಣವಿನಕೆರೆ ಕರೆಯಿಂದ ಒಂದು ದ್ವಿಚಕ್ರ ವಾಹನ ಬಂದಾಗ ಅದನ್ನು ಕೈ ಸನ್ನೆ ಮಾಡಿ ನಿಲ್ಲಿಸಿದಾಗ ಆ ವಾಹನದ ಮೇಲ್ಗಡೆ ಒಂದು ಪ್ಲಾಸ್ಟಿಕ್ ಚೀಲ ಇರುವುದು ಕಂಡು ಬಂದಿತ್ತು ಆ ಚೀಲದ ಒಳಗಡೆ ಏನಿದೆ ಒಂದು ಪ್ರಶ್ನಿಸಿದಾಗ ಆತ ಉತ್ತರ ಹೇಳದೆ ತಡವರಿಸಿದಾಗ ನಾವು ಅನುಮಾನ ಗೊಂಡು ಪರಿಶೀಲಿಸಲು ಅಲ್ಲೇ ಇದ್ದಂತಹ ಪಂಚರನ್ನು ವಿಚಾರಿಸಿದಾಗ ಅವರು ಪಂಚರಾಗಲು ನಿರಾಕರಿಸಿದ ಕಾರಣ ಇಲಾಖಾ ಸಿಬ್ಬಂಧಿಗಳನ್ನು ಪಂಚರನ್ನಾಗಿ ಮಾಡಿಕೊಂಡು ಶೋಧನಾ ವಾರೆಂಟ್ ಪಡೆಯಲು ಸಮಯಾವಕಾಶ ಇಲ್ಲದೇ ಇರುವ ಕಾರಣ ನಾನು, ಇಲಾಖಾ ಸಿಬ್ಬಂದಿಗಳಾದ ನಮ್ಮಗಳೊಂದಿಗೆ

ಚಾಸಾ-1 ರವರನ್ನು ಪಂಚರನ್ನಾಗಿ ಮಾಡಿಕೊಂಡು ಕಲಂ.54 ರ ಪ್ರಕಾರ ಶೋಧನಾ ವಾರೆಂಟನ್ನು ತಯಾರಿಸಿಕೊಂಡು ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಿದಾಗ ಅದರ ಒಳಗಡೆ ಮದ್ಯ ತುಂಬಿದ 90 ಮಿಲಿಯ 165 ಡಿ ಕೆ ಫೈನ್ 9 ವಿಸ್ಕಿ ಎಂದು ನಮೂದಿಸಿರುವ ಮದ್ಯದ ಟೆಟ್ರಾ ಪ್ಯಾಕೇಟ್ ಗಳು ಇರುವುದು ಕಂಡು ಬಂದಿರುತ್ತದೆ. ನಂತರ ಆತನ ಬಗ್ಗೆ ವಿಚಾರಿಸಿದಾಗ ಮೋಹನ್ ರಾಜ್ ಬಿನ್ ರಂಗಪ್ಪ, 47 ವರ್ಷ, ಸೂಗೂರು ಗ್ರಾಮ ನೊಣವಿನಕೆರೆ ಹೋಬಳಿ ತಿಪಟೂರುಗ ಗ್ರಾಮ ಎಂದು ತಿಳಿಸಿದ್ದು ನಾವುಗಳು ಚುನಾವಣಾ ವೇಳೆಯಲ್ಲಿ ನಿಗಧಿತ ಮಿತಿಗಿಂತ ಹೆಚ್ಚಿನ ಮಧ್ಯವನ್ನು ಸಾಗಾಟ ಮಾಡಲು ಯಾವುದಾದರೂ ರಹದಾರಿ ಇದೆಯಾ ಎಂದು ಕೇಳಿದಾಗ ಇಲ್ಲ ಎಂದು ತಿಳಿಸಿರುತ್ತಾನೆ. ದ್ವಿಚಕ್ರ ವಾಹನ ನೋಡಲಾಗಿ ಹೀರೋ ಐಸ್ ಮಾರ್ಕ್ 110 ನೋಂದಣಿ ಸಂಖ್ಯೆ ಕೆಎ-13-ಇಎಲ್ -9543 ಆಗಿರುತ್ತದೆ. ನಂತರ ಆತನಿಗೆ ಸಾಗಾಟ ಮಾಡಲು ಕಾನೂನು ಬಾಹಿರ ಎಂದು ತಿಳಿಸಿ ಮುದ್ದೆಮಾಲು ಮತ್ತು ವಾಹನವನ್ನು ನಮ್ಮ ವಶಕ್ಕೆ ಪಡೆದುಕೊಳ್ಳಲಾಯಿತು. ದೊರೆತ ಮುದ್ದೆಮಾಲಿನಿಂದ ರಾಸಾಯನಿಕ ವಿಶ್ಲೇಷಣಾ ವರದಿಗಾಗಿ 90 ಮಿಲಿಯ 30 ಮದ್ಯ ಟೆಟ್ರಾ ಪ್ಯಾಕೇಟ್ ಗಳನ್ನು ಮಾದರಿ ತೆಗೆದು ಸ್ಥಳದಲ್ಲೇ ಮಾದರಿ ಚೀಟಿ ತಯಾರಿಸಿ ಪಂಚರ ಸಹಿಗಳನ್ನು ಪಡೆದು ಅಂಟಿಸಲಾಯಿತು. ನಂತರ ಆರೋಪಿತನಿಗೆ ಈ ತನಿಖೆಗೆ ಸಹಕರಿಸುತ್ತೇನೆ ಎಂದು ತಿಳಿಸಿದ್ದರಿಂದ ಆತನಿಗೆ ನೋಟೀಸನ್ನು ಜಾರಿಪಡಿಸಿ ಮಹಜರನ್ನು ಬೆಳಗ್ಗೆ 11 ರಿಂದ 12-30 ಗಂಟೆವರೆಗೂ ನಾನೇ ಬೆರಳಚ್ಚು ಮಾಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 30 ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು-1 ಎಂದು ಗುರುತಿಸಲಾಯಿತು. ಚೆಕ್ಕುಬಂಧಿ ಪೂರ್ವಕ್ಕೆ ತುರುವೇಕೆರೆ ಟೌನ್ ಕಡೆಗೆ ಹೋಗುವ ರಸ್ತೆ, ಪಶ್ಚಿಮಕ್ಕೆ ತಿಪಟೂರು ಟೌನ್ ಕಡೆಗೆ ಹೋಗುವ ರಸ್ತೆ, ಉತ್ತರಕ್ಕೆ ತೆಂಗಿನ ತೋಟ ಮತ್ತು ದಕ್ಷಿಣಕ್ಕೆ ಬೋಚಿಹಳ್ಳಿಗೆ ಹೋಗುವ ರಸ್ತೆ. ದಿನಾಂಕಃ 02.05.2023 ರಂದು ದೊರೆತ ಮದ್ಯಗಳನ್ನು ರಾಸಾಯನಿಕ ಪರೀಕ್ಷೆಗೆ ಬೆಂಗಳೂರಿಗೆ ಚಾಸಾ-1 ರವರ ಆದೇಶದ ಮೇರೆಗೆ ನಾನೇ ತೆಗೆದುಕೊಂಡು ಹೋಗಿ ನೀಡಿರುತ್ತೇನೆ. ಅದರಂತೆ ದಿನಾಂಕಃ 05.06.2023 ರಂದು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಪಡೆದುಕೊಂಡು ಬಂದು ಚಾಸಾ-4 ರವರಿಗೆ ನೀಡಿರುತ್ತೇನೆ. ಆ ವಿಷಯವಾಗಿ ದಿನಾಂಕಃ 19.06.2023 ರಂದು ಚಾಸಾ-4 ರವರ ಸಮಕ್ಷಮ ಈ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಹೇಳಿಕೆಯ ಮುಖಾಂತರ ನೀಡಿರುತ್ತೇನೆ. ಈ ಹಂತದಲ್ಲಿ ಸಾಕ್ಷಿಗೆ ಒಂದು

ದಾಖಲಾತಿಯನ್ನು ತೋರಿಸಿದ್ದು ಅದು ನಿಪಿ-6 ಆಗಿರುತ್ತದೆ. ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಗಿದೆ. ನಂತರ ನಿಪಿ-2 ರ ದಾಖಲಾತಿ ತೋರಿಸಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಗಿದೆ. ನಿಪಿ-3 ರ ದಾಖಲಾತಿ ತೋರಿಸಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಗಿದೆ. ನಿಪಿ-4 ರ ದಾಖಲಾತಿ ತೋರಿಸಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಗಿದೆ. ನ್ಯಾಯಾಲಯದ ಮುಂದಿರುವ ಮುದ್ದೆಮಾಲು ಹಾಗೂ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ. T.R.K ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**
**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**